ಆವರಿಸಿ ನಿಂತು ಜನರಿಗೆ ದಾರಿದೀಪವಾಗಿ, ತೋರುದೀಪವಾಗಿ ಬೆಳಗಿದರು. ತುಲಸೀದಾಸರು ಮತ್ತು ಭಾರತೀಯತೆ ಇಂದು ಪರ್ಯಾಯವಾಚಿಯಾಗಿ ಅವಿನಾಭಾವದಿಂದ ಕೂಡಿದೆ. ಅವರ ವಾಣಿ ಸತ್ತವರನ್ನೂ ಬದುಕಿಸಬಲ್ಲುದು. ಅವರು ಅರಮನೆಯಿಂದ ಹಿಡಿದು ಗುಡಿಸಿಲಿನವರೆಗೆ, ಕಡುಬಡವನಿಂದ ಹಿಡಿದು ರಾಜಮಹಾರಾಜರವರೆಗೆ 'ರಾಮನಾಮ'ವೆಂಬ ತಾರಕಮಂತ್ರವನ್ನು ಮುಟ್ಟಿಸಿ ನಿರಾಸೆಯಿಂದ ತುಂಬಿದ್ದ ಹಿಂದೂ ಜನತೆಯಲ್ಲಿ ಜೀವನ ಪ್ರೇರಣೆಯನ್ನು ತುಂಬಿದರು.

ಬೀದಿಗೊಂದು ಗದ್ದುಗೆ, ಕೇರಿಗೊಂದು ಪಂಥ ಹುಟ್ಟಿಕೊಂಡು ಧರ್ಮದ ಹೆಸರಿನಲ್ಲಿ ನಿರಂತರವಾಗಿ ಸುಲಿಗೆ ನಡೆಯುತ್ತಿದ್ದ ಸಮಾಜವನ್ನು ವ್ಯವಸ್ಥೆಗೆ ತರುವುದರಲ್ಲಿ 'ರಾಮ'ನ ಕಥೆಯೊಂದೇ ಸಹಕಾರಿ. ರಾಮ ಮರ್ಯಾದಾಪುರುಷೋತ್ತಮ; ಶೀಲ, ಶಕ್ತಿ ಹಾಗೂ ಸೌಂದರ್ಯದ ಜೀವಂತಮೂರ್ತಿ. ಸಾತ್ವಿಕ ಪ್ರವೃತ್ತಿಯವರಿಗೆ ಶೀಲವು ಪ್ರಿಯವಾದರೆ, ರಜೋಮಯರಿಗೆ ಸೌಂದರ್ಯ ಪ್ರಿಯವಂತೆ; ತಮೋಗುಣಪ್ರಧಾನರಿಗೆ ಶಕ್ತಿ ಪ್ರಿಯವಾಗುತ್ತದೆ. ಈ ರೀತಿ ತುಲಸೀದಾಸರ ರಾಮ, ತ್ರಿಗುಣಾತ್ಮಕವಾದ ಸಮಾಜದ ಎಲ್ಲ ವರ್ಗದ ಜನರಿಗೂ ಪ್ರಿಯನಾದ.

ರಾಮಭಕ್ತಿಯ ಪ್ರಚಾರದ ಅಂಗವಾಗಿ ಅವರು ಹನುಮಂತನ ಪೂಜೆಯನ್ನು ವಿಶೇಷವಾಗಿ ಪ್ರಚಾರ ಮಾಡಿದರು. ಕಾಶಿಯಲ್ಲಿ ಹನ್ನೆರಡು ಕಡೆ ಹನುಮಂತನ ದೇವಸ್ಥಾನಗಳನ್ನು ಕಟ್ಟಿಸಿದರು. ಅವುಗಳ ಜೊತೆಗೆ ಮಲ್ಲಶಾಲೆ, ಅದರೆದುರಿಗೆ ರಾಮಮಂದಿರ. ಕೋದಂಡಪಾಣಿಯ ದೇವಾಲಯ ವಜ್ರಾಂಗಬಲಿಯ ಗುಡಿಯ ಮುಂದೆ. ಹಿಂದೂ ಸಂಘಟನೆಯ ಅದೆಂಥ ಅದ್ಭುತ ಕಲ್ಪನೆ! ತುಲಸೀದಾಸರಿಂದ ಪ್ರಭಾವಿತರಾಗಿ ಮಹಾರಾಷ್ಟ್ರದಲ್ಲಿ ಸಮರ್ಥ ರಾಮದಾಸರು ಪ್ರತಿಯೊಂದು ಗ್ರಾಮದಲ್ಲೂ ಮಾರುತಿ ಗುಡಿಗಳನ್ನು ಕಟ್ಟಿಸಿ, ಅವುಗಳ ಬಳಿ ಕಥಾ ಸಂಕೀರ್ತನೆ ಹಾಗೂ ವ್ಯಾಯಾಮಕ್ಕೆ ಏರ್ಪಾಟು ಮಾಡಿದರು. ಧರ್ಮದ ನೆರಳಿನಲ್ಲಿ ಸಾಮಾಜಿಕ ಹಾಗೂ ರಾಜಕೀಯ ಸಂಘಟನೆ ನಡೆಯಿತು.

ಇಷ್ಟೇ ಅಲ್ಲದೆ, ಯಕ್ಷಗಾನವನ್ನು ಹೋಲುವಂಥ 'ರಾಮ ಲೀಲಾ' ಎಂಬ ಲೋಕನಾಟಕವನ್ನು ತುಲಸೀದಾಸರು ಬಳಕೆಗೆ ತಂದರು. ಮುಸಲ್ಮಾನರ ಕಾಲದಲ್ಲಿ ಸಾಮಾಜಿಕ ನಾಟಕ ಸಾಧ್ಯವಿರಲಿಲ್ಲ. ಹೀಗಾಗಿ ಜನಜೀವನದ ಸಾಂಸ್ಕೃತಿಕ ಪರಿಷ್ಕಾರಕ್ಕಾಗಿ ಕಥಾ ವಾಚನ, ಹರಿಕಥೆಗಳಿಗೂ ಪ್ರೋತ್ಸಾಹವಿತ್ತರು. ಅದರ ಫಲವಾಗಿ ಅವರ ಮೇರುಕೃತಿ 'ರಾಮಚರಿತಮಾನಸ' ಭಾಗವತರಿಂದ ಮನೆಮನೆಗೂ ಮುಟ್ಟಿತು. ಹೀಗೆ ಗ್ರಂಥರಚನೆಯ ಜತೆಜತೆಗೇ ತುಲಸೀದಾಸರು ಸಾಂಸ್ಕೃತಿಕ ಸಂಘಟನೆಗೂ ಕೈ ಹಾಕಿದರು.

ಅವರು ರಾಮಚರಿತಮಾನಸದಲ್ಲಿ ರಾಮನನ್ನು ನಾರಾಯಣತ್ವದಿಂದ ಅಲಂಕರಿಸಿದ್ದಾರೆ. ನರನಾರಾಯಣರ ಹೃದಯಂಗಮ ಸಂಗಮವನ್ನು ತುಲಸೀದಾಸರ ರಾಮನಲ್ಲಿ ಕಾಣಬಹುದು. ಪರಬ್ರಹ್ಮನೆಂಬ ಮಾತ್ರಕ್ಕೆ ರಾಮ ನಮ್ಮಿಂದ, ಈ ಲೋಕದಿಂದ ದೂರ ಹೋಗಿ ಎಲ್ಲೋ ಯಾವುದೋ ಸಿದ್ಧಪೀಠದ ಮೇಲೆ ನಿಂತಿಲ್ಲ. ರಾಮಚರಿತವನ್ನು ಓದುವಾಗಲೂ ಆತನ ಪ್ರಭುಶಕ್ತಿಯ ಬಗೆಗೆ ನಮ್ಮಲ್ಲಿ ಶ್ರದ್ಧೆ ಭಕ್ತಿಗಳು ನೆಲೆ ನಿಂತಿರುತ್ತವೆ. ತುಲಸೀರಾಮಾಯಣ ಭಾರತೀಯತೆಯ ಪ್ರತೀಕ. ಅದು ಎಲ್ಲಿಯವರೆಗೆ ಇರುವುದೋ ಅಲ್ಲಿಯವರೆಗೆ ಹಿಂದುತ್ವ ಅಚ್ಚಳಿಯದಂತೆ ಉಳಿದಿರುತ್ತದೆ.

ತುಲಸೀದಾಸರು ನಿರೂಪಿಸಿರುವ ರಾಮತ್ವ ಹಾಗೂ ರಾವಣತ್ವದ ಕಲ್ಪನೆಯ ಮೂಲದಲ್ಲಿ ಭಾರತದ ಆ ಕಾಲದ ರಾಜಕೀಯ ದುರವಸ್ಥೆ ಅಡಗಿತ್ತು. ಅವರು ಚಿತ್ರಿಸಿರುವ ಕಲಿಕಾಲದ ವರ್ಣನೆಯಲ್ಲಿ ರಾವಣತ್ವ ಬಿಂಬಿಸಿದ್ದರೆ, ರಾಮರಾಜ್ಯದ ವರ್ಣನೆಯಲ್ಲಿ ಅವರ ಆದರ್ಶ ಸಮಾಜದ ಕಲ್ಪನೆಯಿದೆ, ಹೊಂಗನಸು ಇದೆ. ಈ ಭೂಮಿಯ ಮೇಲೆ ದಬ್ಬಾಳಿಕೆ ನಡೆಸುವ ನಾಯಕರು ಎಲ್ಲಿಯವರೆಗೆ ಇರುತ್ತಾರೋ ಅಲ್ಲಿಯವರೆಗೆ ಮಾನವ ಕಲ್ಯಾಣಕ್ಕಾಗಿ ಅಂಥವರ ದಮನ ಅತ್ಯಗತ್ಯ ಎಂಬುದು ಅವರ ಅಭಿಮತ. ಅವರ ಮೂಲಧ್ಯೇಯ ಸಮಾಜದ ನೆಲಗಟ್ಟನ್ನು ಭದ್ರಪಡಿಸುವುದು, ಶಿಥಿಲವಾಗುತ್ತಿದ್ದ ಹಿಂದೂಸಮಾಜದ ವ್ಯವಸ್ಥೆಯನ್ನು ಸುವ್ಯವಸ್ಥಿತಗೊಳಿಸುವುದು.

ಭಾರತೀಯ, ಹಿಂದೂಸಂಸ್ಕೃತಿಯ ಗಗನಚುಂಬಿ ಪ್ರಾಸಾದಕ್ಕೆ ಉಂಟಾಗಿದ್ದ ದುರವಸ್ಥೆಯನ್ನು ಸರಿಪಡಿಸಲು ಹೊರಟ ಅವರು ಹೊಸದೇನನ್ನೂ ಮಾಡಲು ಹವಣಿಸಲಿಲ್ಲ. ಅವರು ಈ ಸಂಸ್ಕೃತಿಮಂದಿರವನ್ನು ಅದರ ಹಿಂದಿನ ಐಸಿರಿ, ಮೈಸಿರಿಯೊಂದಿಗೆ ಮತ್ತೆ ಕಟ್ಟಿಕೊಡುವ ಕನಸನ್ನು ಕಂಡರು.

ಹಿಂದೂ ರಾಷ್ಟ್ರೀಯತೆ ಮಾನವಧರ್ಮದ ಸಿದ್ಧಾಂತಗಳನ್ನು ಒಳಗೊಂಡಿದ್ದರಿಂದ ಪೆಟ್ಟಿನ ಮೇಲೆ ಪೆಟ್ಟು ತಿಂದರೂ ಅದು ನಾಶವಾಗಲಿಲ್ಲ. ಆ ಧರ್ಮಸಮನ್ವಯದ ಫಲವಾಗಿ ಹಿಂದೂಧರ್ಮ ಇತರ ಧರ್ಮಗಳ ಎದುರಿಗೆ ತಲೆ ಎತ್ತಿ ನಿಲ್ಲುವ ಸಾಮರ್ಥ್ಯವನ್ನು ಪಡೆದುಕೊಂಡಿತು ಎನ್ನುತ್ತಾರೆ ಅವರು. ತುಲಸೀದಾಸರ ರಾಮನು ಶಿವ, ವಿಷ್ಣು, ಬುದ್ಧ, ಪರಬ್ರಹ್ಮ, ಕೃಷ್ಣ ಇವರೆಲ್ಲರನ್ನೂ ತನ್ನಲ್ಲೇ ಅಡಗಿಸಿಕೊಂಡು, ಅರಗಿಸಿಕೊಂಡು ಒಂದು ವಿಶಾಲ ಅರ್ಥದಲ್ಲಿ 'ಕೂಡಲಸಂಗಮದೇವ'ನಾದ. ಆದ್ದರಿಂದ ಅವರ 'ರಾಮಚರಿತಮಾನಸ' ಹಿಂದೂಗಳೆಲ್ಲರ ಧಾರ್ಮಿಕ ಗ್ರಂಥ. ಅದು ನಿರ್ಗುಣ–ಸಗುಣ ಭಕ್ತಿ, ಜ್ಞಾನ, ಕರ್ಮ – ಈ ಎಲ್ಲಾ ಸಮಕಾಲೀನ ವಿಚಾರಧಾರೆಗಳನ್ನೂ ತನ್ನ ಒಡಲಿನಲ್ಲಿ ಅಡಗಿಸಿಕೊಂಡ ಕಡಲು.

ತುಲಸೀ ಓರ್ವಕುಶಲ ರಾಜನೀತಿಜ್ಞ, ಸಮಾಜವಿಜ್ಞಾನಿ ತತ್ತ್ವದರ್ಶಿ, ದಾರ್ಶನಿಕ, ಕವಿಶಿರೋಮಣಿ ಹಾಗೂ ಸರಸ್ವತಿಯ ವರಪುತ್ರ. ಅವರು ಭಕ್ತರೂ ಹೌದು. ಕವಿಗಳೂ ಹೌದು. ಅವರ ಅನುಕಂಪದ ಈ ಪ್ರವೃತ್ತಿಯೇ ಸಾಧಾರಣ ಜೀವಿ ಮತ್ತು ಕವಿಯಲ್ಲಿ ಅಂತರವನ್ನು ಉಂಟುಮಾಡುತ್ತದೆ. ಆದಿಕವಿ ವಾಲ್ಮೀಕಿ ಕ್ರೌಂಚಪಕ್ಷಿಯೊಂದರ ವಧೆಯನ್ನು ಕಂಡಾಗ ಅವರ ಶೋಕವೇ ಶ್ಲೋಕವಾಗಿ ಹರಿಯಿತು. ವಾಲ್ಮೀಕಿಯನ್ನು ಕವಿಯನ್ನಾಗಿ ಮಾಡಿದ ಕರುಣಾಲಹರಿ ಬೇರೆ ಯಾರಲ್ಲೂ ಇರಲಿಲ್ಲ. ಋಷಿಯ ಇದೇ ಭಾವುಕತೆ ಆತನನ್ನು ಆದಿಕವಿಯನ್ನಾಗಿ ಮಾಡಿತು. ತುಲಸೀದಾಸರು ನಿಜವಾದ ಅರ್ಥದಲ್ಲಿ ಕವಿಗಳು. ಅವರ ಬಹು ದೊಡ್ಡ ವೈಶಿಷ್ಟ್ಯವೆಂದರೆ ತಮ್ಮ ವಾಣಿಯ ಸ್ಫುರಣಕ್ಕಾಗಿ ಅವರು ರಾಮನಂಥ ಅಸಾಧಾರಣ ಪಾತ್ರವನ್ನು ಆರಿಸಿಕೊಂಡರು. ಆ ಕಥೆಯೇನೂ ಹೊಸದಲ್ಲ. ಆದರೆ ಅದರಲ್ಲಿ ವ್ಯಥೆಯನ್ನು, ಹೊಸತನವನ್ನು ತುಂಬಿ ಹೊಸದರಲ್ಲಿ ಹೊಸತು–ಹಳತು ಎರಡೂ ಕಲೆತು ಬೆಳಗುವಂತೆ ಮಾಡಿದುದು

ತುಲಸೀದಾಸರ ಕೈಚಳಕ. ತುಲಸೀದಾಸರು ಹಿಂದಿಯ ಸರ್ವಶ್ರೇಷ್ಠ ಕವಿಯೆಂದು ಅಭಿಪ್ರಾಯಪಟ್ಟಿರುವ ಪಂಡಿತ ರಾಮಚಂದ್ರ ಶುಕ್ಲರು ಹೀಗೆ ಹೇಳುತ್ತಾರೆ:

"ತುಲಸಿಯ ಮಾನಸದಿಂದ ಹರಿದ ರಾಮಚರಿತದ ಶೀಲ, ಶಕ್ತಿ, ಸೌಂದರ್ಯಮಯ ಸ್ವಚ್ಛ ಧಾರೆ ಬದುಕಿನ ಪ್ರತಿಯೊಂದು ಸ್ಥಿತಿಯನ್ನೂ ಹೊಕ್ಕು ಭಗವಂತನ ಸ್ವರೂಪದ ಪ್ರತಿಬಿಂಬವನ್ನು ಮಿಂಚಿಸಿತು. ರಾಮಚರಿತದ ಇದೇ ಜೀವನವ್ಯಾಪಕತೆ ಅವರ ವಾಣಿಯನ್ನು ಧನಿಕ–ದರಿದ್ರ, ಮೂರ್ಖ–ಪಂಡಿತ ಇವರೆಲ್ಲರ ಹೃದಯ ಮತ್ತು ಕಂಠದಲ್ಲಿ ಎಲ್ಲ ಕಾಲಕ್ಕೂ ನೆಲೆ ನಿಲ್ಲುವಂತೆ ಮಾಡಿತು. ಯಾವುದೇ ಶ್ರೇಣಿಯ ಹಿಂದೂವಾಗಲಿ ಅವನು ತನ್ನ ಬದುಕಿನಲ್ಲಿ, ಕಾಡಿನಲ್ಲಿ, ರಣಕ್ಷೇತ್ರದಲ್ಲಿ, ಆನಂದೋತ್ಸವದಲ್ಲಿ –ಎಲ್ಲೆಡೆಯೂ ರಾಮನನ್ನೇ ಕಂಡ; ಅವರು ಉತ್ತರಾಪಥದ ಸಮಸ್ತ ಹಿಂದೂ ಜೀವನವನ್ನು ರಾಮಮಯವನ್ನಾಗಿ ಮಾಡಿದರು. ಅವರ ವಚನದಲ್ಲಿರುವ ಹೃದಯಸ್ಪರ್ಶಕ ಶಕ್ತಿ ಬೇರೆಲ್ಲೂ ದೊರೆಯದು. ಅವರ ವಾಣಿಯ ಪ್ರೇರಣೆಯಿಂದ ಇಂದೂ ಹಿಂದೂ ಜನತೆ ಸಂದರ್ಭಾನುಸಾರ ಸೌಂದರ್ಯವನ್ನು ಕಂಡು ಒಲಿಯುತ್ತದೆ; ಸನ್ಮಾರ್ಗದಲ್ಲಿ ಕಾಲಿಡುತ್ತದೆ; ವಿಪತ್ತಿನಲ್ಲಿ ಧೈರ್ಯ ತಳೆಯುತ್ತದೆ; ಕಠಿಣ ಕಾರ್ಯದಲ್ಲಿ ಉತ್ಸಾಹಗೊಳ್ಳುತ್ತದೆ. ದಯೆಯಿಂದ ಆರ್ದ್ರಗೊಳ್ಳುತ್ತದೆ; ಕೆಡುಕನ್ನು ಕಂಡು ಗ್ಲಾನಿಗೊಳ್ಳುತ್ತದೆ; ಶಿಷ್ಟತೆಯನ್ನು ಅವಲಂಬಿಸುತ್ತದೆ ಮತ್ತು ಮಾನವಜೀವನದಲ್ಲಿ ಮಹತ್ವವನ್ನು ಅನುಭವಿಸುತ್ತದೆ."

ತುಲಸೀದಾಸರು ಹಿಂದೀ ಸಾಹಿತ್ಯದ ಸರ್ವಶ್ರೇಷ್ಠ ಕವಿಗಳು; ಹಿಂದಿಯ ನಿಧಿ ಹಾಗೂ ಪ್ರತಿನಿಧಿ ಕವಿಗಳು. ಅವರ 'ರಾಮಚರಿತ ಮಾನಸ' ಹಿಂದಿಯ ಗೌರವಗ್ರಂಥ. ಅದರಲ್ಲಿ ಭಾರತದ ಭೂತ, ವರ್ತಮಾನ ಹಾಗೂ ಭವಿಷ್ಯ ಇಣಿಕಿ ಮಿಣುಕುತ್ತದೆ. ಇಂಥ ಕವಿಯನ್ನು ಪಡೆದು ಹಿಂದೀ ಭಾಷೆಯು ಗೌರವಾನ್ವಿತವಾಗಿದೆ. ಹಿಂದೀ ಭಾಷೆ ಮತ್ತು ಸಾಹಿತ್ಯ ಬದುಕಿರುವ ತನಕ ತುಲಸೀದಾಸರ ವಾಣಿ ಅಜರಾಮರವಾಗಿರುತ್ತದೆ.

೧೨೬ ವರ್ಷಗಳ ಅವರ ಅರ್ಥಪೂರ್ಣ ಬದುಕು ಕೊನೆಗೊಂಡು ಸಾವು ಸನ್ನಿಹಿತವಾದಾಗ ಅವರು ನುಡಿದದ್ದು ಈ ದೋಹೆ. (ದ್ವಿಪದಿ)

**ರಾಮನಾಮ ಜಸ ಬರನಿಕೈ ಭಯೋ ಚಹತ ಅಬ್ ಮೌನ್।**
**ತುಲಸೀ ಕೇ ಮುಖ ದೀಜಿಯೇ ಅಬಹೀ ತುಲಸೀ ಸೌನ್॥**

ರಾಮನಾಮ ಜಪವ ಬಣ್ಣಿಸಿ ಈಗ ಬಯಸುವ ಮೌನ ।
ತುಲಸಿಯ ಬಾಯಿಗೆ ಹಾಕಿರಿ ಈಗ ತುಳಸಿ ಹೊನ್ನ ॥

★

## ಸ್ನೇಹಪ್ರಭ

**"ಯಾರು ಇತರರಿಗಾಗಿ ಬದುಕುತ್ತಾನೋ ಅವನು ಮಾತ್ರ ನಿಜವಾಗಿ ಜೀವಿಸುತ್ತಾನೆ" ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಆದರೆ ಇಂದಿನ ಪರಿಸ್ಥಿತಿಯಲ್ಲಿ ನಮ್ಮ ಸ್ವಂತ ಬಾಳುವೆಯನ್ನು ಬಾಳುವುದೇ ಕಷ್ಟವಾಗಿದೆ. ಹೀಗಿರುವಾಗ, ಇತರರಿಗಾಗಿ ಹೇಗೆ ತಾನೇ ಜೀವಿಸಲು ಸಾಧ್ಯ?**

ನಾವು ಇತರರಿಗಾಗಿ ಬಾಳುವುದನ್ನು ಮರೆತಿರುವುದರಿಂದಲೇ ನಮ್ಮ ಸ್ವಂತ ಬಾಳುವೆ ಇಷ್ಟೊಂದು ಕಷ್ಟಕರವಾಗಿರುವುದು. ಇತರರನ್ನು ಕಡೆಗಣಿಸಿ ಯಾವ ವ್ಯಕ್ತಿಯೂ ತನ್ನ ಒಳಿತನ್ನು ಸಾಧಿಸಲಾರ. ಒಂದು ಕುಟುಂಬದಲ್ಲಿರುವ ವ್ಯಕ್ತಿಯು, ಅವನು ಎಷ್ಟೇ ಸ್ವಾರ್ಥಿಯಾಗಿದ್ದರೂ, ತನ್ನ ಹೆಂಡತಿ ಮಕ್ಕಳ ಮೇಲೆ ಸ್ವಲ್ಪವಾದರೂ ಗಮನ ಕೊಡದೆ ನೆಮ್ಮದಿಯಿಂದ ಬಾಳಲಾರ. ಯಾವ ವ್ಯಕ್ತಿಯೂ ಸಂಪೂರ್ಣ ತನಗಾಗಿ ಬಾಳಲಾರ, ಅವನಿಗಿಷ್ಟವಿಲ್ಲದಿದ್ದರೂ ಇತರರು ಅವನ ಪ್ರಯೋಜನವನ್ನು ಪಡೆಯುತ್ತಿರುತ್ತಾರೆ. ಈ ಪ್ರಪಂಚದಲ್ಲಿ ಪರಸ್ಪರ ಸಂಬಂಧಿಸದ, ಪರಸ್ಪರ ಅವಲಂಬಿಸದ ಯಾವುದೂ ಇಲ್ಲ. ಯಾವುದೂ ಇರಲಾರದು. ಪರಸ್ಪರ ಸಂಬಂಧವಿರುವ ಜಗತ್ತಿನಲ್ಲಿ ನಾವು ವಾಸಿಸುತ್ತಿದ್ದೇವೆ. ಇತರರು ತನಗಾಗಿ ಏನಾದರೂ ಮಾಡಬೇಕೆಂದು, ಏನಾದರೂ ಕೊಡಬೇಕೆಂದು ವ್ಯಕ್ತಿ ಅಪೇಕ್ಷಿಸುವುದಿಲ್ಲವೇ? ಹಾಗೆಯೇ ಒಬ್ಬ ವ್ಯಕ್ತಿಯೂ ಇತರರಿಗಾಗಿ ಏನಾದರೂ ಮಾಡಬೇಕಲ್ಲವೆ?

ಸಮಾಜ ನಮಗಿಂತ ಬೇರೆ ಅಲ್ಲ. ನಾವೆಲ್ಲರೂ ಸಮಾಜದ ವಿವಿಧ ಅಂಗಗಳು. ಅಂಗ ಉತ್ತಮವಾಗಿರಬೇಕಾದರೆ ಪೂರ್ಣವೂ ಉತ್ತಮವಾಗಿರಬೇಕು. ನಾನು ಮತ್ತು ಇತರರೆಲ್ಲ ಸೇರಿ ಪೂರ್ಣ ಸಮಾಜವಾಗಿರುವುದು. ಇತರರ ಒಳಿತಿನಲ್ಲಿಯೇ ತನ್ನ ಒಳಿತೂ ಅಡಕವಾಗಿದೆ. ಒಟ್ಟು ದೇಹ ಆರೋಗ್ಯವಾಗಿದ್ದರೆ ಎಲ್ಲ ಅಂಗಾಂಗಗಳೂ ಸ್ವಸ್ಥವಾಗಿರುತ್ತವೆ. ಒಟ್ಟು ಕುಟುಂಬದ ಸ್ವಾಸ್ಥ್ಯದ ಕಡೆಗೆ ನಾವು ಗಮನಕೊಟ್ಟರೆ ವ್ಯಕ್ತಿಯೂ ಸ್ವಸ್ಥನಾಗಿರಲು ಸಾಧ್ಯ. ಒಟ್ಟು ಸಮಾಜದ ಸ್ವಾಸ್ಥ್ಯದ ಕಡೆಗೆ ನಾವು ಗಮನಕೊಟ್ಟರೆ ಎಲ್ಲ ಕುಟುಂಬಗಳೂ ನೆಮ್ಮದಿಯಿಂದಿರಲು ಸಾಧ್ಯ.

ನಮ್ಮ ಜೀವನವೇ ಹೊರೆಯಾದಾಗ ನೆರೆಯವರಿಗೆ ನೆರವಾದರೆ ನಮ್ಮ ಹೊರೆ ಕಡಿಮೆಯಾಗುತ್ತದೆ. ಇಲ್ಲದಿದ್ದರೆ ನೆರೆಯವರೂ ಹೊರೆಯಾಗುತ್ತಾರೆ. ಕಸದ ಬುಟ್ಟಿಗೆ ಎಲ್ಲ ಕಡೆಯಿಂದಲೂ ಕಸ ಬಂದು ಸೇರಿಕೊಳ್ಳುವಂತೆ ಹೊರೆ ಜಾಸ್ತಿಯಾಗುತ್ತಲೇ ಹೋಗುತ್ತದೆ. ಇತರರ ಬಗ್ಗೆ ನಾವು ಭಾವಿಸುವುದರಿಂದ ನಮ್ಮ ಹೊರೆ ಅಧಿಕವಾಗುವುದರ ಬದಲು ನಮ್ಮ ಮನಸ್ಸು ಹಗುರವಾಗುತ್ತದೆ. ಭಾರದ ಬಂಡೆ ನೀರನ್ನು ಹೀರಿಕೊಳ್ಳಲಾರದು, ಹಗುರವಾದ ಹತ್ತಿ ಹೀರಿಕೊಳ್ಳಬಲ್ಲದು.

ನಮ್ಮ ವ್ಯಕ್ತಿತ್ವ ವಿಶಾಲವಾಗಬೇಕು, ನಮ್ಮ ಜೈವಿಕ ವಲಯದಿಂದ, ಅಹಂಕಾರದ ಪರಿಧಿಯಿಂದ ನಾವು ಹೊರಬರಬೇಕು, ನಮ್ಮ ವ್ಯಕ್ತಿತ್ವ ವಿಕಾಸವಾಗಬೇಕು, ಬೃಹತ್ತಾಗಬೇಕು. ನಾವು ಒಂದು ಹುಲ್ಲುಕಡ್ಡಿಯಂತಿದ್ದರೆ ಒಂದು ಸಣ್ಣ ಹಕ್ಕಿ ಅದರ ಮೇಲೆ ಕುಳಿತರೂ ಮುಳುಗಿಬಿಡುತ್ತದೆ; ನಾವು ದೊಡ್ಡ ಮರದ ದಿಮ್ಮಿಯಂತಿರಬೇಕು. ಆಗ ಅದರ ಮೇಲೆ ಆನೆಯೇ ನಿಂತುಕೊಂಡರೂ ಮುಳುಗುವುದಿಲ್ಲ – ಇದು ಶ್ರೀರಾಮಕೃಷ್ಣರ ಅಭಿಪ್ರಾಯ.

(ಬರಹ : ಸ್ವಾಮಿ ನಿತ್ಯಸ್ಥಾನಂದ)